ಕರ್ನಾಟಕ ಸರಕಾರ

# ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 26-02-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Farewell Service Parade: Shri Lalrokhuma Pachuau Director General and Inspector General of Police, Karnataka State** | 27-02-2015 **Friday at 8-00 AM** | **Koramangala Parade Ground, Bangalore** |
| 2 | **Inauguration Ceremony of Deluxe Ward Block : <u>Inauguration:</u> Shri Vajubhai Rudabhai Vala Governor, Govt. of Karnataka** | 27-02-2015 **Friday at 11-00 AM** | **Sri Jaydeva Institute of Cardiovascular Sciences and Research, Bannerghatta Road, 9th Block, Jayanagar, Bangalore – 560 069** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಮುಖ್ಯಮಂತ್ರಿಗಳ ಪ್ರವಾಸ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಫೆಬ್ರವರಿ 28 ಹಾಗೂ ಮಾರ್ಚ್ 1 ರಂದು ಮೈಸೂರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಫೆಬ್ರವರಿ 28 ರಂದು ಮೈಸೂರಿನಲ್ಲಿ 2013 ಹಾಗೂ 2014 ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಾರ್ಚ್ 1 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿರುವ ಮುಖ್ಯಮಂತ್ರಿಗಳು ಅಂದೇ ನಗರಕ್ಕೆ ಹಿಂದಿರುಗಲಿದ್ದಾರೆ.
ಪಹೊ:ಜಿಪಿಆರ್

## ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಪ್ರವಾಸ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯು ಮಾರ್ಚ್ 2 ರಿಂದ 4 ರವರೆಗೆ ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಭೇಟಿ ನೀಡಿ, ಜಿಲ್ಲಾ ಮಟ್ಟದ ಪರಿಶೀಲನಾ ಸಭೆಯನ್ನು ನಡೆಸಲಿದೆ.

ಮಾರ್ಚ್ 2 ರಂದು ಕೊಡಗು ಜಿಲ್ಲೆಯ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಾರ್ಚ್ 3 ರಂದು ಮೈಸೂರು ಜಿಲ್ಲೆಯ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಾಗೂ ಮಾರ್ಚ್ 4 ರಂದು ಚಾಮರಾಜನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಪರಿಶೀಲನಾ ಸಭೆಯನ್ನು ನಡೆಸಲಿದ್ದು ನಂತರ ಸಮಿತಿಯು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ವಸತಿ ಶಾಲೆ/ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ.
ಪಹೊ:ಜಿಪಿಆರ್

## ಮಾಹಿತಿ ಮನರಂಜನೆ ಕಾರ್ಯಕ್ರಮ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಯಲಹಂಕ ಯುನೈಟೆಡ್ ಎನ್ವಿರಾನ್‌ಮೆಂಟ್ ಅಸೋಸಿಯೇಷನ್ ವತಿಯಿಂದ ಫೆಬ್ರವರಿ 28 ರಂದು ಸಂಜೆ 6–00 ಗಂಟೆಗೆ "ಮಾಹಿತಿ ಮನರಂಜನೆ – ಜನಪದ ಸುಗ್ಗಿ ಸಂಭ್ರಮ" ಕಾರ್ಯಕ್ರಮವನ್ನು ನಗರದ ಯಲಹಂಕ ನ್ಯೂಟೌನ್‌ನಲ್ಲಿರುವ ಅಳ್ಳಾಳಸಂದ್ರ ಕೆರೆಯ ಪಕ್ಕ, 13 'ಎ' ಮುಖ್ಯರಸ್ತೆ, 'ಎ' ಸೆಕ್ಟರ್, ಬೆಂಗಳೂರು – 64 ಇಲ್ಲಿ ಹಮ್ಮಿಕೊಂಡಿದೆ.**

**ಖ್ಯಾತ ಜನಪದ ವಿದ್ವಾಂಸರಾದ ಶ್ರೀ ಕುರುವ ಬಸವರಾಜ ಅವರಿಂದ " ಕುಣಿವ ಹೆಜ್ಜೆಯೊಂದಿಗೆ ಒಳಮಾತು" ಕುರಿತ ಮಾಹಿತಿ. ಅಲ್ಲದೆ, ವಿವಿಧ ತಂಡಗಳಿಂದ ತತ್ವಪದ, ಸೋಬಾನೆ ಪದ, ನಂದಿಧ್ವಜ, ಪೂಜಾ ಕುಣಿತ, ವೀರಭದ್ರ ಕುಣಿತ, ಡೊಳ್ಳು ಕುಣಿತ, ಸೋಮನ ಕುಣಿತ, ತಮಟೆ ವಾದನ, ಕೊಂಬು ಕಹಳೆ ವಾದ್ಯ ಪ್ರದರ್ಶನಗಳು ನಡೆಯಲಿವೆ.**
ಪಹೊ:ಜಿಪಿಆರ್.

# ಬೆಂಗಳೂರು ಕಲಾವಿದನಿಗೆ ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

ನವದೆಹಲಿಯಲ್ಲಿ ನಡೆದ 56 ನೇ ರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ ಬೆಂಗಳೂರಿನ ಕಲಾವಿದ ಶ್ರೀ ಮಂಜುನಾಥ ವಿ ಕಲ್ಲೇದೇವರ್ ಅವರಿಗೆ ಭಾರತೀಯ ಸಾಂಸ್ಕೃತಿಕ ಸಂಬಂಧ ಪರಿಷತ್ (ಐ.ಸಿ.ಸಿ.ಆರ್.) ಅಧ್ಯಕ್ಷರಾದ ಪ್ರೊ. ಲೋಕೇಶ್ ಚಂದ್ರ ಅವರು ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿದರು. ರಾಷ್ಟ್ರಾದ್ಯಂತ ಒಟ್ಟು 15 ಉದಯೋನ್ಮುಖ ಕಲಾವಿದರುಗಳನ್ನು ಆಯ್ಕೆ ಮಾಡಿ ಈ ಪ್ರಶಸ್ತಿಗಳನ್ನು ನೀಡಲಾಗಿದೆ. ಈ ಪ್ರದರ್ಶನಕ್ಕೆ ಸಲ್ಲಿಸಲಾಗಿದ್ದ ಒಟ್ಟು 2344 ಕಲಾವಿದರ 6100 ಕಲಾಕೃತಿಗಳಲ್ಲಿ ಕೇವಲ 218 ಕಲಾಕೃತಿಗಳಿಗೆ ಅವಕಾಶ ನೀಡಲಾಗಿತ್ತು. ಪ್ರದರ್ಶನವು ಫೆಬ್ರವರಿ 19 ರಿಂದ ಮಾರ್ಚ್ 16 ರವರೆಗೆ ನವದೆಹಲಿಯ ರಭೀಂದ್ರ ಭವನದ ಮೇಘದೂತ ಬಯಲು ರಂಗಮಂದಿರದಲ್ಲಿ ನಡೆಯಲಿದೆ.

ಈ ಪ್ರತಿಷ್ಠಿತ ಪ್ರಶಸ್ತಿಯು ಒಂದು ಲಕ್ಷ ರೂ. ನಗದು, ತಾಮ್ರದ ಪದಕ ಹಾಗೂ ಪ್ರಮಾಣ ಪತ್ರವನ್ನು ಹೊಂದಿದೆ.

ಛಾಯಾಚಿತ್ರ ಶೀರ್ಷಿಕೆ :

ನವದೆಹಲಿಯಲ್ಲಿ ನಡೆದ 56 ನೇ ರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ ಬೆಂಗಳೂರಿನ ಕಲಾವಿದ ಶ್ರೀ ಮಂಜುನಾಥ ವಿ ಕಲ್ಲೇದೇವರ್ ಅವರಿಗೆ ಭಾರತೀಯ ಸಾಂಸ್ಕೃತಿಕ ಸಂಬಂಧ ಪರಿಷತ್ (ಐ.ಸಿ.ಸಿ.ಆರ್.) ಅಧ್ಯಕ್ಷರಾದ ಪ್ರೊ. ಲೋಕೇಶ್ ಚಂದ್ರ ಅವರು ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರದಾನ ಮಾಡಿದರು. ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಕೆ.ಕೆ. ಚಕ್ರವರ್ತಿ ಅವರು ಚಿತ್ರದಲ್ಲಿದ್ದಾರೆ.

ಸಂಪರ್ಕ: ಶ್ರೀ ಮಂಜುನಾಥ್ ಕಲ್ಲೇದೇವರ್ – 9880141579